# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## M.V.C. No.418/2024

ಇಂದು ದಿನಾಂಕ- **01.07.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಅರ್ಜಿದಾರರ ಪರ ವಕೀಲರಿಂದ -**

ನಾನು ಈ ಅರ್ಜಿಯಲ್ಲಿ ಅರ್ಜಿದಾರರಿದ್ದು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದರಲ್ಲಿ ಬರೆದಿರುವ ವಿಚಾರಗಳೆಲ್ಲ ಸತ್ಯವಾಗಿವೆ. ಅದರಲ್ಲಿರುವ ವಿಚಾರಗಳನ್ನೆಲ್ಲ ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಪ್ರಾರ್ಥನೆ.

| | |
|---|---|
| ನಿ.ಪಿ.-1 | ಪ್ರಥಮ ವರ್ತಮಾನ ವರದಿಯ ನಕಲು |
| ನಿ.ಪಿ.-2 | ಪ್ರಥಮ ವರ್ತಮಾನದ ನಕಲು |
| ನಿ.ಪಿ.-3 | ಸ್ಥಳ ಪಂಚನಾಮೆಯ ನಕಲು |
| ನಿ.ಪಿ.-4 | ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲು |
| ನಿ.ಪಿ.-5 | ಮೋಟಾರು ವಾಹನ ಪರೀಕ್ಷಾ ವರದಿಯ ನಕಲು |
| ನಿ.ಪಿ.-6 | ಮರಣೋತ್ತರ ಪರೀಕ್ಷಾ ವರದಿಯ ನಕಲು |
| ನಿ.ಪಿ.-7 | 1 ನೇ ಎದುರುದಾರರ ಚಾಲನಾ ಪರವಾನಗಿಯ ನಕಲು |
| ನಿ.ಪಿ.-8 | 1 ನೇ ಎದುರುದಾರರ ವಾಹನದ ಆರ್. ಸಿ. ಕಾರ್ಡಿನ ನಕಲು |

| | |
|---|---|
| ನಿ.ಪಿ.-9 | ಆಸ್ಪತ್ರೆ ಬಿಲ್ಲಿನ ಡುಪ್ಲಿಕೇಟ್ ಪ್ರತಿ |
| ನಿ.ಪಿ.-10 | ಔಷಧಿಯ ಬಿಲ್ಲುಗಳು (ಒಟ್ಟು 12) |

ಎಂದು ಗುರುತಿಸಿದ್ದೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀಸವಾಲು - 2 ನೇ ಎದುರುದಾರರ ಪರ ವಕೀಲರಿಂದ-**

ಕಾಲಾವಕಾಶ ಕೇಳಿದ್ದು ಸಕಾರಣ ಇರುವುದಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ, ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಪೀಠ).